MR. SPEAKER :— The probelm is solved.

ಸಂತೇಮಾರಳ್ಳಿ ಕ್ಷೇತ್ರದಲ್ಲಿ ವಿದ್ಯುತ್ ಅಪಘಾತದಲ್ಲಿ ಮೃತರಾದವರಿಗೆ ಪರಿಹಾರ.

366(2117) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :—ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಸಂತೇ ಮಾರಳ್ಳಿ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದ ವಿದ್ಯುತ್ ಅಪಘಾತದಲ್ಲಿ ಮೃತರಾದವರ ಒಟ್ಟು ಸಂಖ್ಯೆ ಎಷ್ಟು. (ಗ್ರಾಮವಾರು ಹೆಸರು ಸಹಿತ ವಿವರ ನೀಡುವುದು);

ಆ) ಮೃತರಾದವರ ಕುಟುಂಬದವರಿಗೆ ಸರ್ಕಾರದವರು ಪರಿಹಾರ ಧನವನ್ನು ಮಂಜೂರು ಮಾಡಿದ್ದಾರೆಯೇ (ವಿವರ ನೀಡುವುದು);

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ಯಾವಾಗ ನೀಡಲಾಗುವುದು ಮತ್ತು ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಒಬ್ಬ ವ್ಯಕ್ತಿಯು ವಿದ್ಯುತ್ ಅಪಘಾತದಿಂದ ಮೃತಪಟ್ಟಿರುತ್ತಾರೆ. ವಿವರಗಳು ಕೆಳಕಂಡಂತಿದೆ.

1) ಮೃತಪಟ್ಟ ವ್ಯಕ್ತಿಯ ಹೆಸರು ಶ್ರೀ ಪುಟ್ಟ.

2) ತಂದೆಯ ಹೆಸರು ಶ್ರೀ ಎಸ್. ಸುಬ್ಬೇಗೌಡ

3) ಗ್ರಾಮದ ಹೆಸರು ಹೆಬ್ಬಸೂರು

4) ಹೋಬಳಿ ತಾಲ್ಲೂಕು ಚಂದಕವಾಡಿ ಚಾಮರಾಜನಗರ

5) ವಿದ್ಯುತ್ ಅಪಘಾತ ಉಂಟಾದ ದಿನಾಂಕ : 30-12-96

ಆ), ಇ) 30-12-96 ರಂದು ವಿದ್ಯುತ್ ಅಪಘಾತಕ್ಕೆ ಒಳಗಾಗಿ ಮೃತರಾದ ಶ್ರೀ ಪುಟ್ಟರವರ ಪ್ರಕರಣದಲ್ಲಿ ಪರಿಹಾರ ಧನವನ್ನು ಮಂಜೂರು ಮಾಡಲು ಸಾಧ್ಯವಿಲ್ಲ. ಕಾರಣವೇನೆಂದರೆ, ಈ ವಿದ್ಯುತ್ ಅಪಘಾತಕ್ಕೆ ಮಂಡಳಿಯು ಜವಾಬ್ದಾರರಲ್ಲ.

ಎ.ಆರ್. ಕೃಷ್ಣಮೂರ್ತಿ :— ನನ್ನ ಸಂತೆಮಾರಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಅಪಘಾತದಿಂದ ಕಳೆದ ಮೂರು ವರ್ಷಗಳಿಂದ ಸತ್ತವರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಕೊಟ್ಟಿರುವ ಕನ್ನಡದ ಉತ್ತರದಲ್ಲಿ ಒಬ್ಬ ವ್ಯಕ್ತಿ ಅಂದರೆ ಪುಟ್ಟ ತಂದೆ ಹೆಸರು ಸುಬ್ಬೇಗೌಡ ಎಂದು ವಿವರ ಕೊಟ್ಟಿದ್ದಾರೆ. ಇದಕ್ಕೆ ಪರಿಹಾರ ಕೊಡುವ ಸಂದರ್ಭ

ಬರುವುದಿಲ್ಲವೆಂದೂ ಉತ್ತರ ಹೇಳಿದ್ದಾರೆ. ನನ್ನ ಮೂಲ ಪ್ರಶ್ನೆ ಬಗ್ಗೆ ಈಗತಾನೇ ಮಾನ್ಯ ಸಚಿವರೊಡನೆ ಮಾತನಾಡಿದ ಮೇಲೆ ಕರೆಕ್ಟಿಡ್ ಉತ್ತರ ಕೊಟ್ಟಿದ್ದಾರೆ. ಅದು ಸಂಬಂಧಪಟ್ಟವರಿಂದ ಸಹಿ ಆಗಿಲ್ಲ. ಅದರಲ್ಲಿ ಶ್ರೀ ಬಸವೇಗೌಡ ಎಂಬುವರು 12-6-99 ರಂದು ವಿದ್ಯುತ್ ವೈರ್ ಕೆಳಗೆ ಬಿದ್ದು ಅದನ್ನು ತಾಕಿ ಅವರು ಮೃತಪಟ್ಟಿದ್ದಾರೆ. ಮತ್ತೊಂದು, ಚಿಕ್ಕಕೂಸಪ್ಪ ಕಾಲಂದೂರು ಹೋಬಳಿಯ ಭೀಮರಳಿ ಗ್ರಾಮದವರು, ಅವರು 28-5-99ರ ಬೆಳಿಗ್ಗೆ ವಿದ್ಯುತ್ ಹಾಯ್ದು ಮೃತಪಟ್ಟಿದ್ದಾರೆ. ಇವೆರಡೂ ವಿಚಾರದಲ್ಲೂ ಪೋಲಿಸರು ದೂರುಗಳನ್ನು ದಾಖಲೆ ಮಾಡಿಕೊಂಡಿದ್ದಾರೆ. ಚಿಕ್ಕಕೂಸಪ್ಪ ಎಂಬುವರ ವಿಷಯದಲ್ಲಿ ಕೆಇಬಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೃತ್ಯ ಜರುಗಿದೆ ಎಂದು ದಾಖಲಾಗಿದೆ. ಕಾರಣ, ಎರಡು ಮೂರು ದಿವಸ ಆಗಿತ್ತು ವೈರು ಕಳಚಿಬಿದ್ದು, ಗ್ರಾಮಸ್ಥರು ದೂರು ಕೊಟ್ಟರೂ ಕೆಇಬಿಯವರು ಬಂದು ಸರಿಪಡಿಸದ ಪ್ರಯುಕ್ತ ಒಬ್ಬ ವ್ಯಕ್ತಿ ನಾಲ್ಕು ಎಮ್ಮೆ, ಒಂದು ಕುರಿ ಒಟ್ಟಿಗೆ ಸತ್ತಿರುವ ಪ್ರಕರಣವಿದು.ಮತ್ತು ಇಲ್ಲಿ ಅಧಿಕಾರಿಗಳ ಮೇಲೂ ಕೇಸು ದಾಖಲಾಗಿದೆ, ಸರ್ಕಾರಿ ಕೆಲಸದಲ್ಲಿ ನಿರ್ಲಕ್ಷ್ಯ ಎಂದು ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬೇಕು ಮತ್ತು ನಿರ್ಲಕ್ಷ್ಯದಿಂದಾಗಿರುವುದರಿಂದ ಇಲಾಖೆಯಿಂದ ಪರಿಹಾರ ಕೊಡಿಸಲು ಮಾನ್ಯ ಸಚಿವರು ಅವಕಾಶ ಮಾಡಿಕೊಡಬೇಕು. ಮತ್ತು ಶ್ರೀ ಬಸವೇಗೌಡ ಎಂಬುವರಿಗೆ ಅಕ್ಸಿಡೆಂಟ್ ನಿಂದಾದ್ದರಿಂದ ಕೊಡಲಿಕ್ಕೆ ಬರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದು ಅಕ್ಸಿಡೆಂಟಾದದ್ದಲ್ಲ. ಕೆಇಬಿ ಲೈನ್ ಬಿದ್ದಿರುವಾಗ ಬೆಳಗಿನ ಜಾವ ಅವನು ಭೂಮಿ ಉಳುಮೆ ಮಾಡುವುದಕ್ಕೆ ಹೋದ ಸಂದರ್ಭದಲ್ಲಿ ಆಗಿರುವುದು. ಆದ್ದರಿಂದ ಈ ಎರಡು ಪ್ರಕರಣಗಳಲ್ಲೂ ಪರಿಹಾರ ಕೊಡಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ನಾನು ಕೇಳಬಯಸುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ :— ಅಧ್ಯಕ್ಷರೇ, ಉತ್ತರದಲ್ಲೇ 1996-97ನೇ ಸಾಲಿನಲ್ಲಿ ಸತ್ತ ವ್ಯಕ್ತಿಗೆ ಪರಿಹಾರ ಕೊಡಲು ಬರುವುದಿಲ್ಲವೆಂದು ಹೇಳಿದ್ದೇನೆ. ಈ ವರ್ಷ 20 ದಿವಸದ ಹಿಂದೆ ಆದ ಒಂದು ಘಟನೆ ಮತ್ತು ಒಂದು ವಾರದ ಹಿಂದೆ ಆದ ಘಟನೆ ಬಗ್ಗೆ ನಮಗಿನ್ನೂ ಸಿಜಿ ವರದಿ ಬಂದಿಲ್ಲ. ಅದು ಬಂದ ತಕ್ಷಣ ನಮ್ಮ ಇಲಾಖೆಯವತಿಯಿಂದ ತಪ್ಪಿತಸ್ಥರ ಮೇಲೆ ಕ್ರಮ ನಾವು ತೆಗೆದುಕೊಳ್ಳಬೇಕಾಗುತ್ತದೆ. ಪರಿಹಾರವನ್ನೂ ಆದಷ್ಟು ಬೇಗ ಅವರು ವಾರಸುದಾರರ ಸರ್ಟಿಫಿಕೇಟ್ ಇತರ ಕಾಗದಪತ್ರಗಳನ್ನು ಕೊಟ್ಟತಕ್ಷಣ ಅಲ್ಲಿನ ಎಸ್.ಇ. ಅವರಿಗೆ ನಾವು ಪವರ್ ಡೆಲಿಗೇಟ್ ಮಾಡಿದ್ದೇವೆ. ಕಾಗದ ಪತ್ರಗಳು ಬಂದ ತಕ್ಷಣ ಅಲ್ಲಿನ ಎಸ್.ಇ. ಅವರಿಗೆ ನಾವು ಪವರ್ ಡೆಲಿಗೇಟ್ ಮಾಡಿದ್ದೇವೆ. ಕಾಗದಪತ್ರಗಳು ಬಂದ ತಕ್ಷಣ ಪರಿಹಾರ ಕೊಡಿಸಲು ವ್ಯವಸ್ಥೆ ಮಾಡುತ್ತೇವೆ. ಸಿಎಜಿ ವರದಿ ಬರುವುದು ತಡವಾದರೆ ಇವತ್ತೇ ತರಿಸಿ ಆದಷ್ಟು ಬೇಗ ಇವೆರಡು ಕೇಸುಗಳ ಬಗ್ಗೆ ತನಿಖೆ ಮಾಡಿಸುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ :— ಮಾನ್ಯ ಸಚಿವರು ಚಿಕ್ಕಬೂಸಪ್ಪನ ಪ್ರಕರಣದಲ್ಲಿ ಪರಿಹಾರ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಬಸವೇಗೌಡನ ಬಗ್ಗೆ ಅಕ್ಸಿಡೆಂಟ್ ಎಂದು ಹೇಳಿಬಿಟ್ಟಿದ್ದಾರೆ. ಅದು ಅಕ್ಸಿಡೆಂಟಿನಿಂದಾದ್ದಲ್ಲ, ಬೆಳಿಗ್ಗೆ ಆ ರೈತ ಉಚ್ಚುಮೆ ಮಾಡಲು ಹೋದ ಸಂದರ್ಭದಲ್ಲಿ ಆಕಸ್ಮಿಕ ಆಗಿರುವುದು. ಆದ್ದರಿಂದ ಈ ಎರಡು ವ್ಯಕ್ತಿಗಳಿಗೂ ಸರ್ಕಾರದ ಮಾನದಂಡದ ಪ್ರಕಾರ ಪರಿಹಾರವನ್ನು ತುರ್ತಾಗಿ ಕೊಡಿಸಿಕೊಡಬೇಕೆಂದು ಮತ್ತೊಮ್ಮೆ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ :— ಅಧ್ಯಕ್ಷರೇ, ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಬಸವೇಗೌಡನ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ; ಇನ್ನೊಂದು ಗಂಟೆಯಲ್ಲೇ ಮಾನ್ಯ ಸದಸ್ಯರಿಗೆ ಸಂಪೂರ್ಣ ಮಾಹಿತಿ ತರಿಸಿಕೊಡುತ್ತೇನೆ.

ಶ್ರೀ ಯು.ಬಿ. ಬಣಕಾರ್ :— ಅಧ್ಯಕ್ಷರೇ, ಇದೇ ರೀತಿ ಪ್ರಶ್ನೆಗೆ ಲಿಖಿತ ಮೂಲಕ ಉತ್ತರ ನನಗೆ ಬಂದಿದೆ. ಈಗಿನ ಹಾವೇರಿ, ಗದಗ್, ಧಾರವಾಡ ಜಿಲ್ಲೆಯಲ್ಲಿ ಇಂತಹವು 19 ಪ್ರಕರಣಗಳು ಬಾಕಿ ಇವೆ. ಅಘಾತಕ್ಕೊಳಗಾದ ಆ ಕುಟುಂಬಗಳಿಗೆ ಆದಷ್ಟು ಬೇಗ ಪರಿಹಾರ ಕೊಡಬೇಕು ಆದರೆ ಒಂದು ಎರಡು ವರ್ಷಗಳೂ ಅನಿವಶ್ಯಕ ವಿಳಂಬವಾಗುತ್ತಿದೆ. ಅದನ್ನು ತಪ್ಪಿಸುವ ಸಲುವಾಗಿ ತಾವೊಂದು ಕಾಲಮಿತಿ ಕಾರ್ಯಕ್ರಮ ಹಾಕಿಕೊಳ್ಳಿ. ವಾರಸುದಾರರು ಅರ್ಜಿ ತಂದುಕೊಟ್ಟ ಒಂದು ತಿಂಗಳೊಳಗೆ ಎಸ್.ಇ ಅವರಿಂದ ಪರಿಹಾರ ಕೊಡಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಕೊರ್ತಿ-ಕೊಲ್ಹಾರ ಸೇತುವೆ ಕಾಮಗಾರಿಗಳು.

367(2238) ಶ್ರೀ ಕಾರ್‌ಜೋಳ್ ಗೋವಿಂದ ಮಕಟಪ್ಪ (ಮುಧೋಳ) :— ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊರ್ತಿ-ಕೊಲ್ಹಾರ ಸೇತುವೆಯ ನಿರ್ಮಾಣ ಕಾರ್ಯದ ಬಗ್ಗೆ ವಿಳಂಬ ಮಾಡುತ್ತಿರುವುದನ್ನು ಪ್ರತಿಭಟಿಸಿ ಆ ಭಾಗದ ಜನರು ಮುಷ್ಕರ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಸರ್ಕಾರ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡಲು ಇರುವ ತೊಂದರೆ ಏನು?

ಇ) ಇದರ ನಿರ್ಮಾಣಕ್ಕೆ ಬೇಕಾಗುವ ಅಂದಾಜು ಮೊತ್ತ ಎಷ್ಟು?